**ಇ.ಪಿ. ನಂ.21/2018 ಪಿ.ಡಬ್ಲ್ಯೂ ಃ 1**

ದಿಃ 27.10.2018 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಭೋದಿಸಲಾಯಿತು.

ಪಾಟೀ ಸವಾಲುಃ 1 ರಿಂದ 7ನೇ ಎದುರುದಾರರ ಪರ ವಕೀಲರಿಂದಃ-

ಪಕ್ಷಗಾರರು ಮತ್ತು ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನಹಡಗಲಿ.

ಇ.ಪಿ. ನಂ. 21/2018 ಪಿ.ಡಬ್ಲ್ಯೂ : 2

ದಿಃ 27.10.2018 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ-

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ಸರಿಯಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ಪಾಟೀ ಸವಾಲುಃ 8 ರಿಂದ 15ನೇ ಎದುರುದಾರರ ಪರವಾಗಿ ಶ್ರೀ ಎಚ್.ಬಿ.ಆರ್.ಕೆ. ವಕೀಲರಿಂದಃ-

ನಾನು ಮೂಲತಃ ಅಡವಿಮಲ್ಲಿನ ಕೇರಿಯವರು. ಅಡವಿಮಲ್ಲಿನ ಕೇರಿಯಿಂದ 4–5 ಕಿ.ಮೀ ಸುತ್ತಮುತ್ತಲಿನಲ್ಲಿ ನದಿಬೇವುರು, ಗೊರಕನಹಳ್ಳಿ, ಕಣಿವೆಹಳ್ಳಿ ಮತ್ತು ತಾಳಕಲ್ಲು ಇದೆ ಎಂದರೆ ಸರಿ. ಹಾಲಪ್ಪನವರು ಮತ್ತು ಚೆನ್ನಬಸಪ್ಪನವರ ಕುಟುಂಬಕ್ಕೆ ಅಡವಿಮಲ್ಲಿಕೇರಿಯಲ್ಲಿ ನೂರಾರು ಎಕರೆ ಜಮೀನು ಇದೆ ಎಂದರೆ ಅವರ ಕುಟುಂಬದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ರೇಣುಕಮ್ಮ ಸ್ವಾಧೀನದಲ್ಲಿರುವ ಹೊಲದ ಹತ್ತಿರ ಹಾಲಪ್ಪ ಮತ್ತು ಚೆನ್ನಬಸಪ್ಪನವರು ತಂಟೆ ಮಾಡಿದ್ದರಿಂದ ಆಕೆ ಈ ನ್ಯಾಯಾಲಯಕ್ಕೆ ಬಂದಿದ್ದಾರೆ. ರೇಣಮ್ಮ ಸ್ವಾಧೀನದಲ್ಲಿರುವ ಸ್ವತ್ತು ದೊಡ್ಡ ಹೊಲ ಆಗಿದ್ದು ಅದರ ಚೆಕ್ಕುಬಂದಿ ನನಗೆ ಗೊತ್ತಿಲ್ಲ ಆದರೆ ಒಂದು ಕಡೆ ಕೊಟ್ರೇಶಪ್ಪನವರು ಮಾತ್ರ ಇದ್ದಾರೆ. ಸದರಿ ಜಮೀನು ಅಡವಿ ಮಲ್ಲಿನಕೇರಿ ಜಮೀನಿಗೆ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಸದರಿ ಭೂಮಿ ಹೊಂದಿಕೊಂಡತೆ ಚೆನ್ನಬಸಪ್ಪನ ಮಗ ಸಿದ್ದಪ್ಪನ ಜಮೀನು ಹೊಂದಿಕೊಂಡಂತೆ ಇರುತ್ತದೆ ಎಂದರೆ ಸರಿಯಲ್ಲ, ಕೊಟ್ರಬಸಪ್ಪನ ಜಮೀನು ಸಹ ಅದಕ್ಕೆ ಹೊಂದಿಕೊಂಡಂತೆ ಇಲ್ಲ, ಅದರ ಪಕ್ಕದಲ್ಲಿ ಹರಪ್ಪನಹಳ್ಳಿ ಹಾಲಪ್ಪನವರ ಸ್ವತ್ತು ಮತ್ತು ಪೂಜಾರಿ ಕೊಟ್ರಪ್ಪನವರ ಸ್ವತ್ತು ಸಹ ಇಲ್ಲ, ವೀರಸಂಗಯ್ಯನವರ ಸ್ವತ್ತು ದಾವಾ ಸ್ವತ್ತಿನಿಂದ ಬಹಳ ದೂರದಲ್ಲಿದೆ. ದೊಡ್ಡ ಹೊಲದ ಸರ್ವೇ ನಂಬರ್ ಗೊತ್ತಿಲ್ಲ, ದೊಡ್ಡ ಹೊಲದ ಪೈಕಿ ಒಂದು ಮೂರು ಎಕರೆ ಚಿಲ್ಲರೆಯಷ್ಟು, ಇನ್ನೊಂದು 5 ಎಕರೆ ಚಿಲ್ಲರೆಯಷ್ಟು ಮತ್ತು ಮತ್ತೊಂದು 6 ಎಕರೆ ಚಿಲ್ಲರೆಯಷ್ಟು ಇದೆ. ರೇಣುಕಮ್ಮ ಸ್ವಾಧೀನದಲ್ಲಿರುವ ಜಮೀನಿನ ಪಹಣಿಯನ್ನು ನಾನು ನೋಡಿಲ್ಲ, ನಮ್ಮೂರಿಗೆ ಗ್ರಾಮಲೆಕ್ಕಧಿಕಾರಿಯವರು ಬರುತ್ತಾರೆ. ನಮ್ಮೂರಿನಲ್ಲಿ ಯಾರ‍್ಯಾರು ಯಾರ ಹೊಲದಲ್ಲಿ ಏನು ಬೆಳೆದಿದ್ದಾರೆ ಎಂದು ನಮೂದು ಮಾಡಿಕೊಂಡು ಹೋಗುತ್ತಾರೆ ಎಂದರೆ ಸರಿ. ಯಾರ ಭೂಮಿಯನ್ನು ಯಾರು ಸಾಗು ಮಾಡುತ್ತಾರೆ ಎಂದು ಬರೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಹಾಲಪ್ಪ ಮತ್ತು ಚೆನ್ನಬಸಪ್ಪನವರ ಕುಟುಂಬದಲ್ಲಿ ಸ್ವತ್ತುಗಳ ಬಗ್ಗೆ ವ್ಯಾಜ್ಯ ಇದೆ ಅಂತ ಸುತ್ತಮುತ್ತಲಿನ ಎಲ್ಲ ಹಳ್ಳಿಗಳಿಗೂ ಗೊತ್ತು ಅಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಅನ್ನುತ್ತಾರೆ.

ರೇಣುಕಮ್ಮ ಮೂಲತಃ ಸೋಗಿ ಗ್ರಾಮದವರು. ಆಕೆಗೆ 2 ಜನ ಗಂಡು ಮಕ್ಕಳು ಇರುತ್ತಾರೆ. ಅವರ ಹೆಸರು ಮಂಜಪ್ಪ ಮತ್ತು ಬಸವ. ಅವರಿಬ್ಬರು ರವೀಂದ್ರಪ್ಪನವರ ಮನೆಯ ಹೊಲ ಮನೆಯ ಕೆಲಸ ಮಾಡುತ್ತಾರೆ ಎಂದರೆ ಇಲ್ಲ ಎನ್ನುತ್ತಾರೆ. ರೇಣುಕಮ್ಮರವನ್ನು ನಾನು ಸುಮಾರು 30 ವರ್ಷಗಳಿಂದ ನಾನು ನೋಡುತ್ತಿದ್ದೇನೆ. ಆಕೆಗೆ ಸೋಗಿ ಗ್ರಾಮದಲ್ಲಿ ಸ್ವಲ್ಪ ಭೂಮಿ ಇದೆ ಮಲ್ಲಿನಕೇರಿಯಲ್ಲಿ ಭೂಮಿ ಮತ್ತು ಮನೆ ಎರಡೂ ಇದೆ. ರೇಣಮ್ಮನ ಪಕ್ಕದಲ್ಲಿಯ ನನ್ನ 1 ಎಕರೆ ಭೂಮಿ ಇದೆ. ಕಳೆದ ವರ್ಷ ರೇಣುಕಮ್ಮ ತನ್ನ ಸ್ವಾಧೀನದಲ್ಲಿರುವ ಜಮೀನಿನಲ್ಲಿ ಕಬ್ಬು ಬೆಳೆದಿದ್ದರು ಎಂದರೆ ಸರಿ. ನಮ್ಮೂರಿನಲ್ಲಿ ಕಬ್ಬು ಬೆಳೆದರೆ ಸಾಮಾನ್ಯವಾಗಿ ಎಲ್ಲರು ಮುಂಡರಗಿ ಸಕ್ಕರೆ ಫ್ಯಾಕ್ಟರಿಗೆ ಕಳುಹಿಸುತ್ತಾರೆ. ಸಕ್ಕರೆ ಫ್ಯಾಕ್ಟರಿಯವರು ಕಬ್ಬು ಸರಬರಾಜು ಮಾಡಿದವರಿಗೆ ಚೀಟಿ ಕೊಡುತ್ತಾರೆ ಎಂದರೆ ಸರಿ. ಸಕ್ಕರೆ ಕಾರ್ಖಾನೆಯವರು ತಮಗೆ ಕಬ್ಬು ಸರಬರಾಜು ಮಾಡುವವರ ರೈತರ ಪಟ್ಟಿ ಮಾಡಿಟ್ಟಿಕೊಂಡಿರುತ್ತಾರೆ ಎಂದರೆ ಸರಿ. ರೇಣುಕಮ್ಮ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೋಡಿಲ್ಲ, ರೇಣುಕಮ್ಮ ತಾನು ಯಾವ ರಿತೀ ಸ್ವಾಧೀನದಲ್ಲಿ ಇದ್ವಾಳೆ ಎಂದು ನನಗೆ ಹೇಳಿಲ್ಲ ಆದರೆ ಆಕೆ ಆತನ ಗಂಡನ ಕಾಲದಿಂದಲೂ ಸ್ವಾಧೀನದಲ್ಲಿ ಇದ್ದು ಈಗ ಆಕೆ ಸ್ವಾಧೀನದಲ್ಲಿ ಇದ್ವಾಳೆ ಅಷ್ಟು ಮಾತ್ರ ನನಗೆ ಗೊತ್ತು. ಊರಿನಲ್ಲಿ ಕಂದಾಯ ಕಟ್ಟದಿದ್ದಾರೆ ಗ್ರಾಮಲೆಕ್ಕಧಿಕಾರಿಗಳು ನೋಟಿಸು ಕೊಡುತ್ತಾರೆ ಮತ್ತು ಕಂದಾಯ ಕಟ್ಟಿಸಿಕೊಳ್ಳುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ, ನಾನಂತೂ ಕಂದಾಯ ಕಟ್ಟಿಲ್ಲ ಎನ್ನುತ್ತಾರೆ. ಕಳೆದ ವರ್ಷ ಸಾಲ ತೆಗೆದು ಕೊಂಡ ರೈತರ ಪೈಕಿ 1 ಲಕ್ಷ ಸಾಲ ಮನ್ನ ಆಗಿದೆ ಎಂದರೆ ಸರ್ಕಾರದವರು ಇನ್ನೂ ಯಾವುದೇ ಸಾಲ ಮನ್ನ ಮಾಡಿಲ್ಲ, ಸರ್ಕಾರದವರು ಸುಳ್ಳು ಕಥೆ ಹೇಳುತ್ತಿದ್ದಾರೆ ಎನ್ನುತ್ತಾರೆ. ನಮ್ಮೂರಿನಲ್ಲಿ ರೈತರು ತಾವು ಬೆಳೆದ ಬೆಳೆಗಳನ್ನು ಯಾರಿಗೆ ಬೇಕು ಅವರಿಗೆ ಮಾರುತ್ತಾರೆ, ನಿಖರವಾಗಿ ಒಬ್ಬರಿಗೆ ಮಾರುವುದಿಲ್ಲ, ಕೊಂಡುಕೊಂಡವರು ರೈತರ ಬೆಳೆಗಳಿಗೆ ಬೆಳೆಯ ವಿವರ ತೂಕ, ಅಮಾಲಿ ಚಾರ್ಜುಗಳು ವಿವರ ಬರೆದು ಚೀಟಿ ಕೊಡುತ್ತಾರೆ ಎಂದರೆ ಅದು ಸರಿ, ಆದರೆ ಆ ಚೀಟಿಗಳನ್ನು ಈಗ ಯೂರು ಇಟ್ಟುಕೊಳ್ಳುತ್ತಾರೆ ಎನ್ನುತ್ತಾರೆ. ಈಗ್ಗೆ 7 ವರ್ಷಗಳ ಹಿಂದೆ ಚೆನ್ನಬಸಪ್ಪನ ಮಕ್ಕಳು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಗಲಾಟೆ ಮಾಡಿಕೊಂಡು ದೊಡ್ಡ ಗಲಾಟೆಯಾಗಿ ಪೋಲೀಸರು ಬಂದು ಕ್ರಿಮಿನಲ್ ಮೊಕದ್ದಮೆ ಆಗಿತ್ತು ಎಂದರೆ ನಾನು ಆಗ ಊರಿನಲ್ಲಿ ಇರಲಿಲ್ಲ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಚೆನ್ನಬಸಪ್ಪನವರ ಮಗ ಹರ್ಷವರ್ದನ ಮಲ್ಲಿನಕೇರಿಯಲ್ಲಿ ವಾಸವಾಗಿದ್ದಾರೆ. ರವೀಂದ್ರನಾಥ ಬೊಮ್ಮನಹಳ್ಳಿ ಮತ್ತು ಹಡಗಲಿಯಲ್ಲಿ ಓಡಾಡಿಕೊಂಡು ಇರುತ್ತಾರೆ. ರವೀಂದ್ರನಾಥರವರ ಹೆಸರಿನಲ್ಲಿ ಲಾಡ್ಜ್ ಇದೆ. ಸದರಿ ಲಾಡ್ಜ್‌ನಲ್ಲಿ ಬಸಪ್ಪನ ಮಗ ಕೆಲಸ ಮಾಡುತ್ತಾನೆ ಎಂದರೆ ಅದು ನನಗೆ ಗೊತ್ತಿಲ್ಲ, ಬಸಪ್ಪನ ಮಗ ಲಾಡ್ಜ್‌ನ ಕೆಲಸ ಮಾಡುವಾಗ ಆತನ ಮೇಲೆ ಕ್ರಿಮಿನಲ್ ಮೊಕದ್ದಮೆ

ಆಗಿತ್ತು ಎಂದರೆ ನಾನು ಪದೇ ಪದೇ ಹಡಗಲಿ ಬರುವುದಿಲ್ಲ, ಆ ವಿಷಯ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಕೇಸುಗಳ ನಂಬರ್‌ಗಳ ವಿವರವನ್ನು ರೇಣುಕಮ್ಮ ಕೊಟ್ಟಿರುತ್ತಾರೆ. ಚೆನ್ನಬಸಪ್ಪನ ಮಕ್ಕಳ ನಡುವೆ ಮತ್ತು ರೇಣಮ್ಮ ನಡುವೆ ಯಾವುದೇ ಗಲಾಟೆಯಾಗಿಲ್ಲ. ಹಾಲಪ್ಪನ ಮಕ್ಕಳು ಮತ್ತು ರೇಣಮ್ಮ ನಡುವೆ ಯಾವುದೇ ಗಲಾಟೆಯಾಗಿಲ್ಲ. ನಾನು ಹಡಗಲಿ ಸಿವಿಲ್ ಕೋರ್ಟಿನಲ್ಲಿ ಬಹಳಷ್ಟು ಕೇಸಿನಲ್ಲಿ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಮಲ್ಲಿನಕೇರಿಯಲ್ಲಿ ಯಾವುದಾದರು ಗಲಾಟೆ ನೆಡೆದರೆ ಪೋಲೀಸರು ಸಾಕ್ಷಿ ಸಹಿ ಹಾಕು ಎಂದು ಕೇಳುತ್ತಾರೆ ಎಂದರೆ ಸರಿಯಲ್ಲ. ಬಸಪ್ಪನವರ ಜಮೀನಿನಲ್ಲಿ ರೇಣುಕಮ್ಮ ಸ್ವಾಧೀನದಲ್ಲಿ ಇದ್ದಾರೆ ಎಂದು ನಾನು ಮತ್ತು ರೇಣುಕಮ್ಮ ಕಟ್ಟುಕತೆ ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ವಿವಾಧಿತ ಸ್ವತ್ತಿಗೆ ಹೊಂದಿಕೊಂಡಂತೆ ಸ.ನಂ.87 ರ ಸ್ವತ್ತು ಇದೆ ಎಂದರೆ ಅದು ನನಗೆ ಗೊತ್ತಿಲ್ಲ. 87 ರ ಸ್ವತ್ತು ಇವತ್ತು ಚೆನ್ನಬಸಪ್ಪನವರ ಸ್ವಾಧೀನದಲ್ಲಿ ಇದೆ ಎಂದರೆ ಅದು ನನಗೆ ಗೊತ್ತಿಲ್ಲ.

ಪಾಟೀ ಸವಾಲು : 1 ರಿಂದ 7ನೇ ಎದುರುದಾರರ ಪರ ವಕೀಲರು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನಹಡಗಲಿ.